**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 2548/2019**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಪ್ರೇಮ್ | **ಡಿ ಡಬಲ್ಲ್ಯೂ.-1** |
| **ತಂದೆಯ ಹೆಸರು** | - | ಎಂ ಗೌತಮ್ ಚಂದ್ರ | |
| **ವಯಸ್ಸು** | - | 37 ವರ್ಷ | |
| **ಉದ್ಯೋಗ** | - | ಬಿಸಿನೆಸ್ | |
| **ವಾಸಸ್ಥಳಃ** | - | ಮದ್ದೂರು | |

ದಿನಾಂಕಃ 27.06.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ**

ನನಗೆ ಪಿರ್ಯಾದುದಾರರ ಪರಿಚಯವಿರುವುದಿಲ್ಲ. ನನಗೆ ಸೇರಿದ ಚೆಕ್ಕುಗಳು ಡಿಸೆಂಬರ್ 2014 ನೇ ಇಸವಿಯಲ್ಲಿ ಕಳೆದುಹೋಗಿದ್ದವು. ಸದರೀ ಚೆಕ್ಕುಗಳು ಕಳುವಾಗಿದ್ದ ಬಗ್ಗೆ ದೂರು ನೀಡಿದ್ದೆ, ತದನಂತರ ಪಿರ್ಯಾದಾರರ ತಾಯಿ ಗೌರಮ್ಮರವರು 2015 ನೇ ಇಸವಿಯಲ್ಲಿ ಚೆಕ್ ಬೌನ್ಸ್ ಪ್ರಕರಣವನ್ನು ದಾಖಲಿಸಿದ್ದರು ನಾನು ಆವಾಗ ಖರ್ಚು ವೆಚ್ಚವನ್ನು ಕೊಟ್ಟು ರಾಜೀ ಮಾಡಿಕೊಂಡಿದ್ದೆ, ಆದರೆ ಪಿರ್ಯಾದಾರರು ನನಗೆ ಯಾವುದೇ ಹಣವನ್ನು ಸಾಲವಾಗಿ ಕೊಡದೇ ಇದ್ದರೂ ಅವರಿಗೆ 2014 ನೇ ಇಸವಿಯಲ್ಲಿ ಸಿಕ್ಕಿದ್ದ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು 2019 ರಲ್ಲಿ ನನ್ನ ವಿರುದ್ಧ ಪ್ರಕರಣವನ್ನು ದಾಖಲು ಮಾಡಿದ್ದು, ಸದರೀ ವಿಚಾರ ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಾಗ ಗೊತ್ತಾಗಿರುತ್ತದೆ. ಹಾಗೂ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ನನ್ನ ಪರವಾಗಿ ದಾಖಲಾತಿಗಳನ್ನಾಗಿ ಗುರುತು ಮಾಡಿಕೊಳ್ಳಲು ಕೋರಿಕೊಳ್ಳುತ್ತೇನೆ. ದಿನಾಂಕಃ 06.01.2015 ರ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ. 1 ಎಂದು ಗುರುತಿಸಲಾಯಿತು. ಅಕೌಂಟ್ಸ್ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ. 2 ಎಂದು ಗುರುತಿಸಲಾಯಿತು. ಎರಡು ಆದಾಯ ತೆರಿಗೆ ಪಾವತಿಯ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಡಿ. 3 ಮತ್ತು 4 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಎಲ್ಲಾ ಕಾರಣಗಳಿಂದಾಗಿ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಿಕೊಡಬೇಕಾಗಿ ಕೋರಿಕೊಳ್ಳುತ್ತೇನೆ.

**ಈ ಹಂತದಲ್ಲಿ ಪಾಟೀ ಸವಾಲಿಗೆ ಪಿರ್ಯಾದುದಾರರ ಪರ ವಕೀಲರು ಕಾಲವಕಾಶ ಕೋರಲಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

1 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.